**ಪತ್ರಿಕಾ ಪ್ರಕಟಣೆ**

ವಿಜಯಪುರ

ದಿನಾಂಕ: 28.06.2021.

**1] ಎಪಿಎಮ್‌ಸಿ ಪೊಲೀಸ ಠಾಣೆ ಗುನ್ನೆ ನಂ: 62/2021 ಕಲಂ: 188, 269 ಐಪಿಸಿ. ಮತ್ತು 87 ಕೆ.ಪಿ ಆ್ಯಕ್ಟ**

ದಿನಾಂಕ 27.06.2021. ರಂದು 16:45 ಗಂಟೆಗೆ ಸುಮಾರಿಗೆ ಇದರಲ್ಲಿಯ ಆರೋಪಿತರಾದ 1) ಸುರೇಶ ಶ್ರೀಶೈಲ ಪಾಟೀಲ, ಸಾ॥ ಶಿಖಾರಖಾನೆ ವಿಜಯಪುರ 2) ಸಂತೋಷ ರುದ್ರಪ್ಪ ಮಸಬಿನಾಳ, ಸಾ॥ ಶಿಖಾರಖಾನೆ ವಿಜಯಪುರ 3) ಅಶೋಕ ತಿಮ್ಮಣ್ಣ ಹೆರವಳ್ಳಿ, ಸಾ॥ ಶಿಖಾರೆಖಾನೆ ವಿಜಯಪುರ 4) ಮಾಳಿಂಗ ಯಂಕಪ್ಪ ಬಂಡಿ, ಸಾ॥ ಶಿಖಾರೆಖಾನೆ ವಿಜಯಪುರ 5) ಜಾವೀದ ಕರೀಮಸಾಬ ಮುಲ್ಲಾ, ಸಾ॥ ಶಿಖಾರೆಖಾನೆ ವಿಜಯಪುರ 6) ಸಂದೀಪ ಮಲ್ಲಿಕಾರ್ಜುನ ನೇಗಿನಾಳ, ಸಾ॥ ಶಿಖಾರೆಖಾನೆ ವಿಜಯಪುರ 7) ಮಹೇಶ ಭೀಮರಾವ್ ಕ್ಷೀರಸಾಗರ, ಸಾ॥ ಶಿಖಾರೆಖಾನೆ ವಿಜಯಪುರ 8) ಪ್ರಕಾಶ ಅಶೋಕ ಹಲಸಂಗಿ, ಸಾ॥ ಶಿಖಾರೆಖಾನೆ ವಿಜಯಪುರ ಇವರು ಮಾನ್ಯ ಸರ್ಕಾರದಿಂದ ಲಾಕ್‌ಡೌನ್ ಆದೇಶದಂತೆ ಯಾರೇ ವ್ಯಕ್ತಿಗಳು ಅನಾವಶ್ಯಕವಾಗಿ ಮಾಸ್ಕನ್ನು ಹಾಕಿಕೊಳ್ಳದೆ ಹೊರಗಡೆ ತಿರುಗಾಡುವುದು, ಗುಂಪು ಗೂಡುವುದು, ಹಾಗೂ ಅಂತರ ಕಾಪಾಡಿಕೊಳ್ಳುವ ಬಗ್ಗೆ ಸ್ಪಷ್ಟ ನಿರ್ಧೇಶನ ಇದ್ದರೂ ಸದರಿ ಕೋರೋನಾ ವೈರಸ್ ಒಬ್ಬರಿಂದ ಮತ್ತೊಬ್ಬರಿಗೆ ಹರುತ್ತದೆ ಅಂತಾ ತಿಳಿದು ತಿಳಿದು ಎಲ್ಲರೂ ಕುಳಿತು ಇಸ್ಪೇಟ್ ಎಲೆಗಳ ಮೇಲೆ ಪಣಕ್ಕೆ ಹಣವನ್ನು ಕಟ್ಟಿ ಅಂದರ ಬಾಹರ ಅಂಬುವ ಮನ್ನಾ ಜೂಜಾಟ ಆಡುತ್ತಿದ್ದಾಗ ಸಿಕ್ಕ ಅಪರಾಧ. ರೋಖ ಹಣ: 2,570/–ರೂಗಳು. ಈ ಬಗ್ಗೆ ಸ:ತ: ಸೋಮೇಶ ಗೆಜ್ಜಿ ಪಿ.ಎಸ್.ಐ (ಕಾ&ಸು)ಎ.ಪಿ.ಎಂ.ಸಿ ಪೊಲೀಸ್ ಠಾಣೆ ವಿಜಯಪುರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 27.06.2021 ರಂದು ಎಪಿಎಮ್‌ಸಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ವಿಜಯಪುರ ಗ್ರಾಮೀಣ ಪೊಲೀಸ ಠಾಣೆ ಗುನ್ನಾ. ನಂ: 75/2021 ಕಲಂ: 20(ಎ) ಎನ್ ಡಿ ಪಿ ಎಸ್ ಆ್ಯಕ್ಟ**

ದಿನಾಂಕ 27.06.2021 ರಂದು 18.00 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತನಾದ 1] ಮಂಜುನಾಥ ತಂ ಕಾಶೀನಾಥ ಪಾಟೀಲ್ ವಯಾ 35 ವರ್ಷ ಜಾತಿ ಹಿಂದೂ ಗಾಣಿಗ ಉದ್ಯೋಗ ಒಕ್ಕಲುತನ ಸಾಃ ನಾಗಠಾಣ ಈತನು ತನ್ನ ಜಮೀನದಲ್ಲಿ ಸ್ವಂತ ಲಾಬಕ್ಕಾಗಿ ಅಕ್ರಮವಾಗಿ ಗಾಂಜಾ ಗಿಡಗಳನ್ನು ಬೆಳಿಸಿದಾಗ ಸಿಕ್ಕ ಅಪರಾಧ ಜಪ್ತಾದ ಮಾಲು 1] 22 ಹಸಿ ಗಾಂಜಾದ ಗಿಡಗಳು ಕಾಂಡ ಮತ್ತು ಬೇರು ಎಲೆಯ ಸಮೇತ ಇದ್ದದ್ದು ಒಟ್ಟು 50 ಕೆಜಿ ಅ॥ಕಿ॥ 3,20,000/– ರೂ ಈ ಬಗ್ಗೆ ಸ:ತ: ಜಿ.ಎಸ್.ಉಪ್ಪಾರ ಪಿಎಸ್‌ಐ ವಿಜಯಪೂರ ಗ್ರಾಮೀಣ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 27.06,2021 ರಂದು ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ಎಪಿಎಮ್‌ಸಿ ಪೊಲೀಸ ಠಾಣೆ ಗುನ್ನಾ. ನಂ: 61/2021 ಕಲಂ: 143, 147, 341, 324, 504, 506 ರೆ/ವು 149 ಐಪಿಸಿ.**

ದಿನಾಂಕ 26.06.2021 ರಂದು ರಾತ್ರಿ 10:30 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತರಾದ 1) ಸೋಮು @ ಸೋಮನಾಥ ಗಣಪತಿ ಸಾಳುಂಕೆ, 2) ಈಶ್ವರ ಹಾಗೂ ಇನ್ನೂ 5–6 ಜನರು ಸಾ॥ ಎಲ್ಲರೂ ಇಂಡಿ ರೋಡ ಬಂಬಳ ಅಗಸಿ ವಿಜಯಪುರ. ದಿನಾಂಕ: 26.06.2021 ರಂದು ಪಿರ್ಯಾದಿ ತನ್ನ ಅಳಿಯಂದಿರರು ಕೂಡಿ ತಮ್ಮ ಮನೆಯ ಮುಂದೆ ಕುಳಿತಾಗ ಇದರಲ್ಲಿಯ ಆರೋಪಿತರು ಕೂಡಿಕೊಂಡು ತಮ್ಮ ಮನೆಯ ಮುಂದೆ ಹಾಯ್ದು ಹೊರಟಾಗ ತಮ್ಮ ಜೊತೆ ಆದ ಹಿಂದಿನ ಜಗಳದ ಸಿಟ್ಟು ಹಿಡಿದು ತಮಗೆ ನೋಡಿ ಸೋಮು @ ಸೊಮನಾಥ ಇವನು ಯಾಸಿದಿಗಡಿ ಬೈದಾಡುತ್ತಾ ಹೋಗುತ್ತಿದ್ದು ಆಗ ತಮ್ಮ ಅಳಿಯನಾದ ಸಚೀನ್ ಇತನು ಅವನಿಗೆ ಯಾಕೇ ಬೈದಾಡುತ್ತಿ ತಾವೇನು ಮಾಡಿದ್ದೇವೆ ಅಂತಾ ಕೇಳಲು ಹೋದಾಗ ಸಚೀನ್ ಇತನಿಗೆ ರಂಡಿ ಮಗನೆ ತಮಗೆ ಕೇಳಲಿಕ್ಕೆ ಬರತ್ತಿಯಾ ಅಂತಾ ಕಪಾಳಕ್ಕೆ ಹೊಡೆದನು, ಆಗ ಇನ್ನೂಳಿದ ಅಳಿಯಂದಿರಾದ ಪ್ರಹ್ಲಾದ್, ಸಂಗಮೇಶ ಮತ್ತು ತಮ್ಮನಾದ ವಿಜಯಕುಮಾರ ಇವರಿಗೆ ಎಲ್ಲಾ ಆರೋಪಿತರು ಕೂಡಿಕೊಂಡು ಓಣಿಯಲ್ಲಿ ನೀವು ಬಾಳ ದೊಡ್ಡಸ್ತನ ಮಾಡ್ತಿರಿ ತಾವು ಸೂಳೆ ಮಕ್ಕಳಿಗೂ ಅಂಜಾಂಗಿಲ್ಲಾ, ಅಂತಾ ಅನ್ನುತ್ತಾ ಕಬ್ಬಿಣದ ರಾಡ್ ಹಾಗೂ ಕಲ್ಲನ್ನು ತೆಗೆದುಕೊಂಡು ಪ್ರಹ್ಲಾದ್ ಇತನಿಗೆ ಹೊಡೆದು ಗಾಯ ಒಳಪೆಟ್ಟು ಪಡಿಸಿ ಕೆಳಗೆ ಕೆಡವಿ ಒದೆಯುತ್ತಿದ್ದಾಗ ತಾನು ಗಾಭರಿಯಾಗಿ ಜಗಳಾ ಬಿಡಿಸಲು ಹೋದಾಗ ಸೋಮು @ ಸೋಮನಾಥ ಸಾಳುಂಕೆ, ಈಶ್ವರ ಹಾಗೂ ಇನ್ನೂ 5–6 ಜನರು ಕೂಡಿಕೊಂಡು ತಮ್ಮ ಕೈಯಲ್ಲಿದ್ದ ಕಬ್ಬಿಣದ ರಾಡ್‌ನಿಂದ ಹಾಗೂ ಕಲ್ಲಿನಿಂದ ತನ್ನ ಮೂಗಿಗೆ, ಹಣೆಗೆ, ಬಾಯಿಗೆ ಹೊಡೆದು ರಕ್ತಗಾಯಗಾಯ ಗೊಳಿಸಿ ಅವಾಚ್ಯವಾಗಿ ಬೈದು ಜೀವದ ಬೆದರಿಕೆ ಹಾಕಿದ ಅಪರಾಧ. ಈ ಬಗ್ಗೆ ದಯಾನಂದ ಷಣ್ಮುಖಪ್ಪ ಬಾಗಲಕೋಟ, ಸಾ॥ ಇಂಡಿ ರೋಡ ರಜಪೂತಗಲ್ಲಿ ವಿಜಯಪುರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 27.06,2021 ರಂದು ಎಪಿಎಮ್‌ಸಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.